ಶ್ರೀ ಬಿ.ಎಸ್ ಯಡಿಯೂರಪ್ಪ: ಮಾನ್ಯ ಅಧ್ಯಕ್ಷರೆ, ಒಂದು ತಿಂಗಳ ಹಿಂದೆಸತ್ಯಾಗ್ರಹ ಮಾಡುತ್ತಿದ್ದ ಸಂದರ್ಭದಲ್ಲಿ ನಾನು ಖುದ್ದಾಗಿ ಅಲ್ಲಿಗೆ ಹೋಗಿ ಅವರ ಜೊತೆ ಮಾತನಾಡಿ ಅವರನ್ನು ವಿದಾನ ಸೌಧಕ್ಕೆ ಕರೆದುಕೊಂಡು ಬಂದು ಮಾತುಕತೆ ನಡೆಸಿ ಇದರ ಬಗ್ಗೆ ಪರಿಶೀಲನೆ ಮಾಡುತ್ತಿದ್ದೇವೆಂದು ಹೇಳಿದ್ದೇನೆ. ಈಗ ನಾನು ಅವರಲ್ಲಿ ವಿನಂತಿ ಮಾಡುವುದೇನೆಂದರೆ, ದಯಮಾಡಿ ತಮ್ಮ ಸತ್ಯಾಗ್ರಹವನ್ನು ವಾಪಸ್ಸು ತೆಗೆದುಕೊಳ್ಳಬೇಕು ನಾನು ಮಾನ್ಯ ಮುಖ್ಯಮಂತ್ರಿಗಳ ಜೊತೆ ಮಾತನಾಡುತ್ತೇನೆ. ಆದಷ್ಟು ಬೇಗ ಕ್ಯಾಬಿನೆಟ್ ಸಬ್‌ಕಮಿಟಿಯಲ್ಲಿ ಇದರ ಸಾಧಕ ಬಾಧಕಗಳ ಬಗ್ಗೆ ಚರ್ಚೆ ಮಾಡಿ ಒಂದು ತೀರ್ಮಾನಕ್ಕೆ ಬರುತ್ತೇವೆ. ಆದ್ದರಿಂದ ಈ ಮನೆಯ ಮೂಲಕ ಅವರಲ್ಲಿ ವಿನಂತಿ ಮಾಡುವುದೇನೆಂದರೆ, ಈ ಸತ್ಯಾಗ್ರಹವನ್ನು ಕೈ ಬಿಡಿ. ಕ್ಯಾಬಿನೆಟ್ ಸಬ್ ಕಮಿಟಿಯಲ್ಲಿ ಇದರ ಬಗ್ಗೆ ಚರ್ಚೆ ಮಾಡುತ್ತೇವೆ. ದಯಮಾಡಿ ತಾವು ಸಹಕಾರ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ವಾಟಾಳ್ ನಾಗರಾಜ್: ಅವರು ನೀಡಿರತಕ್ಕಂಥ ಉತ್ತರ ನನಗೆ ಸಮಾಧಾನವಾಗಲಿಲ್ಲ. ನಾನು ಸಭಾತ್ಯಾಗ ಮಾಡುತ್ತೇನೆ. ಮಾನ್ಯ ಯಡಿಯೂರಪ್ಪನವರು ಈ ರೀತಿಯಾಗಿ ಹೇಳುವುದು ಸರಿಯಲ್ಲ. ತಾವು ಎಷ್ಟು ಶಕ್ತಿಯುತವಾಗಿ ಇದರ ಬಗ್ಗೆ ಇಲ್ಲಿ ಕೂಗಾಡುತ್ತಿದ್ದೀರಿ ಮತ್ತು ಮಾತನಾಡುತ್ತಿದ್ದೀರಿ. ಅಲ್ಲಿಗೆ ಹೋಗಿ ತಾವು ಈ ರೀತಿ ಏಕಾಗಿದ್ದೀರಿ? ಪ್ರತಿ ಸಾರಿಯೂ ಈ ಮಾತನ್ನು ಹೇಳಿಸಿಕೊಳ್ಳುವುದಕ್ಕೆ ನಿಮಗೆ ಯಾವ ರೀತಿಯಾಗುತ್ತದೆ. ಇದು ಸರಿಯಾದ ಕ್ರಮವಲ್ಲ. ಅವರು ಮಳೆ ಗಾಳಿಗೆ ಲೆಕ್ಕಿಸದೆ ಹತ್ತಾರು ಸಾವಿರ ಜನರು ಇಲ್ಲಿಗೆ ಬಂದು ಸತ್ಯಾಗ್ರಹ ಮಾಡುತ್ತಿದ್ದಾರೆ. ಮತ್ತೆ ಅಮರಣಾಂತರ ಉಪವಾಸ ಕುಳಿರುಕೊಂಡಿದ್ದಾರೆ. ಅವರ ಬಗ್ಗೆ ನಿವು ಈ ರೀತಿಯಾಗಿ ಹಾರಿಕೆ ಉತ್ತರ ಕೊಡತಕ್ಕಂಥದ್ದು ಸರಿಯಲ್ಲ. ಬಹಳ ನೋವಿನಿಂದ ನಾನು ಸಭಾತ್ಯಾಗ ಮಾಡುತ್ತೇನೆ.

(ಈ ಹಂತದಲ್ಲಿ ವಾಟಾಳ್ ನಾಗರಾಜ್‌ರವರು ಸಭಾತ್ಯಾಗ ಮಾಡಿದರು)